ಶ್ರೀ ಗುಂಡಪ್ಪ ವಕೀಲ್: ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ತೋರಣ ಗ್ರಾಮದಲ್ಲಿ ಒಂದು ಆಸ್ಪತ್ರೆ ಇದೆ. ಅಲ್ಲಿ ಯಾವುದೇ ಸ್ಟಾಫ್ ಇಲ್ಲ. ಡಾಕ್ಟರ್‌ಗಳಿಲ್ಲ, ನರ್ಸ್‌ಗಳಿಲ್ಲ.....

ಅಧ್ಯಕ್ಷರು: ಇದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿ.

ಶ್ರೀ ಗುಂಡಪ್ಪ ವಕೀಲ್: ಇದೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಉಪಪ್ರಶ್ನೆ. ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ತೋರಣ ಗ್ರಾಮದಲ್ಲಿ ಮೂರು ವರ್ಷಗಳ ಹಿಂದೆ ದವಾಖಾನೆ ಉದ್ಘಾಟನೆಯಾಯಿತು. ಆದರೆ ಇಲ್ಲಿಯವರೆಗೆ ಅಲ್ಲಿ ಯಾವುದೇ ಸ್ಟಾಫ್‌ನ್ನು ಕೊಟ್ಟಿಲ್ಲ. ಡಾಕ್ಟರ್ ಇಲ್ಲದ ಕಾರಣ ಅದನ್ನು ಮುಚ್ಚಿದ್ದಾರೆ. ಸ್ವಲ್ಪ ಅದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

ಡಾ: ಎ.ಬಿ.ಮಾಲಕರೆಡ್ಡಿ: ಈಗಾಗಲೇ ಸದನಕ್ಕೆ ನಾನು ಅನೇಕ ಸಲ ತಿಳಿಸಿದ್ದೇನೆ. 573 ಮಂದಿ ಡಾಕ್ಟರ್‌ಗಳ ಆಯ್ಕೆಗೆ ಪ್ರೊಸೆಸ್ ನಡೆದಿದೆ. ಈಗಾಗಲೇ 150 ಸರ್ಟಿಫಿಕೇಟ್ಸ್ ವೆರಿಫೈ ಆಗಿ ಬಂದಿವೆ. ಉಳಿದದ್ದು ಬರಲಿ ಬಿಡಲಿ ನಾವು ಇನ್ನು ಒಂದು ವಾರದಲ್ಲಿ ಅಥವಾ ಏಂಟು-ಹತ್ತು ದಿವಸಗಳಲ್ಲಿ ಈ ನೇಮಕಾತಿ ಮಾಡತಕ್ಕಂಥ ಪ್ರಕ್ರಿಯೆಯನ್ನು ಪೂರ್ತಿಗೊಳಿಸುತ್ತೇವೆ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯರು ಮಂತ್ರಿಗಳ ಹತ್ತಿರ ಬರಬೇಡಿ. ತಡೆಹಿಡಿಯಲಾದ ಪ್ರಶ್ನೆ.

ಸಿಂಧನೂರು ತಾಲ್ಲೂಕಿನಲ್ಲಿರುವ ಪದವಿ ಪೂರ್ವ ವಿದ್ಯಾಲಯ.

113( 1138)

ಶ್ರೀ ಹಂಪನಗೌಡ ಬಾದರ್ಲಿ(ಸಿಂಧನೂರು): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ತಾಲ್ಲೂಕಿನಲ್ಲಿ ಪದವಿ ಪೂರ್ವ ವಿದ್ಯಾಲಯಗಳ ಸಂಖ್ಯೆ ಎಷ್ಟು? ಅಭ್ಯಾಸ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪದವಿಪೂರ್ವ ಕಾಲೇಜುಗಳು ತಾಲ್ಲೂಕಿನಲ್ಲಿ ಇವೆಯೇ?

ಆ) ಸಿಂಧನೂರು ತಾಲ್ಲೂಕಿನಲ್ಲಿ ಬರುವ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ತೆಗೆದುಕೊಂಡ ಕ್ರಮಗಳೇನು?

ಇ) ಈ ವರ್ಷ ಹೊಸ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಏಳು ಪದವಿ ಪೂರ್ವ ಕಾಲೇಜುಗಳಿವೆ. 1064 ವಿದ್ಯಾರ್ಥಿಗಳಿರುತ್ತಾರೆ. ಹೌದು.

ಆ) ಬಂದಿದೆ. ನಿಯೋಜನೆ ಮೇರೆಗೆ ವಾರಕ್ಕೆ ಮೂರು ದಿನ ಪಾಠ ಮಾಡಲು ಪಕ್ಕದ ಕಾಲೇಜುಗಳ ಉಪನ್ಯಾಸಕರಿಗೆ ಸೂಚಿಸಲಾಗಿದೆ.

ಇ) ಇಲ್ಲ.

ಶ್ರೀ ಹಂಪನಗೌಡ ಬಾದರ್ಲಿ: ಮಾನ್ಯ ಅಧ್ಯಕ್ಷರೇ, ಸಿಂಧನೂರು ತಾಲ್ಲೂಕಿನಲ್ಲಿ ಪದವಿಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು, ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು, ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪದವಿಪೂರ್ವ ಕಾಲೇಜುಗಳು ತಾಲ್ಲೂಕಿನಲ್ಲಿ ಇವೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ ''ಏಳು ಪದವಿಪೂರ್ವ ಕಾಲೇಜುಗಳು ಇವೆ'' ಎಂದು ಉತ್ತರ ಕೊಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ ಇರುವುದು ಐದು ಪದವಿಪೂರ್ವ ಕಾಲೇಜುಗಳು. ವಿದ್ಯಾರ್ಥಿಗಳ ಸಂಖ್ಯೆಗೆ ಅನುಸಾರವಾಗಿ ಇನ್ನೂ ಎರಡು ಕಾಲೇಜುಗಳ ಕೊರತೆ ಇದೆ. ಮಾನ್ಯ ಮಂತ್ರಿಗಳು ಈ ಕೊರತೆಯನ್ನು ನೀಗಿಸುತ್ತಾರೆಯೆ? ಅದರ ಜೊತೆಗೆ ಉಪನ್ಯಾಸಕರ ಕೊರತೆ ನನ್ನ ಕ್ಷೇತ್ರದಲ್ಲಿ ಬಹಳಷ್ಟು ಇದೆ. ಐದು ಪದವಿಪೂರ್ವ ಕಾಲೇಜುಗಳು ಇದ್ದರೆ, ಕಳೆದ ಮೂರು ವರ್ಷಗಳಿಂದ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ ಇದೆ. ಆದರೆ ಡೆಪ್ಯುಟೇಶನ್ ಮೇಲೆ ವಾರದಲ್ಲಿ ಮೂರು ದಿನ ಉಪನ್ಯಾಸಕರಿಗೆ ಬೇರೆ ಕಾಲೇಜುಗಳಿಂದ ಬಂದು ಉಪನ್ಯಾಸ ಮಾಡಲು ಆದೇಶ ನೀಡಲಾಗಿದೆ ಎಂದು ಹೇಳುತ್ತಿದ್ದಾರೆ. ಒಂದು ಕಾಲೇಜಿನಿಂದ ಇನ್ನೊಂದು ಕಾಲೇಜಿಗೆ ಹೋಗಬೇಕಾದರೆ 30 ಕಿಲೋಮೀಟರ್ 40 ಕಿಲೋಮೀಟರ್ ಅಂತರ ಇದೆ. ದಯವಿಟ್ಟು ಈ ವರ್ಷ ಜನರಲ್ ಟ್ರಾನ್ಸ್‌ಫರ್‌ನಲ್ಲಿಯಾದರೂ ಉಪನ್ಯಾಸಕರನ್ನು ಅಲ್ಲಿ ನೇಮಕ ಮಾಡಿ. ಇಲ್ಲ, ವಿಶೇಷವಾಗಿ ಯಾರಾದರೂ ಬರುವುದಿದ್ದರೆ ಹಾಕಿಕೊಡಿ. ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ವಿಶ್ವನಾಥ್: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಅವರ ಕ್ಷೇತ್ರದಲ್ಲಿ ಏನು ಪದವಿಪೂರ್ವ ಕಾಲೇಜುಗಳಲ್ಲಿ ಶಿಕ್ಷಕರ ಕೊರತೆ ಇದೆ ಮತ್ತು ಇನ್ನೂ ಎರಡು ಕಾಲೇಜುಗಳ ಕೊರತೆ ಬಗ್ಗೆ ಹೇಳಿದ್ದಾರೆ. ಶಿಕ್ಷಕರ ಕೊರತೆಯನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಖಂಡಿತವಾಗಿಯೂ ತುಂಬಲಾಗುತ್ತದೆ. ಆದರೆ ಮತ್ತೆ ಹೊಸದಾಗಿ ಪಿ.ಯು. ಕಾಲೇಜುಗಳನ್ನು ಕೊಡಬೇಕೇ ಅಥವಾ ಬೇಡವೇ ಎನ್ನುವುದರ ಬಗ್ಗೆ ಸರ್ಕಾರದಲ್ಲಿ ನಾವು ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಆದರೂ ಕೂಡ ಕೆಲವು

ಕಡೆಗಳಲ್ಲಿ ಈ ಜೂನಿಯರ್ ಕಾಲೇಜುಗಳು ಡೀಫಂಕ್ಟ್ ಆಗಿವೆ. ನಿಮ್ಮ ಜಿಲ್ಲೆಯಲ್ಲಿ ಯಾವುದಾದರೂ ಆ ರೀತಿ ಇದ್ದರೆ ಅದನ್ನು ಅಲ್ಲಿಗೆ ಶಿಫ್ಟ್ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಮತ್ತು ಮಾನ್ಯ ಸದಸ್ಯರು ಏನು ವಸ್ತು ಸ್ಥಿತಿಯನ್ನು ಹೇಳಿದ್ದಾರೆ, ಅಷ್ಟು ಕೊರತೆಯನ್ನು ನೀಗಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ: ಬರೇ ನಮ್ಮ ಜಿಲ್ಲೆಯಲ್ಲಿ ಡಿಫಂಕ್ಟ್ ಆದದ್ದು ನಮ್ಮ ಜಿಲ್ಲೆಗೆ ಕೊಡುವುದು ಎಂದು ಅಲ್ಲ. ತಾವು ಬೇರೆ ಬೇರೆ ಜಿಲ್ಲೆಗಳಲ್ಲಿ ಅಂಕಿಸಂಖ್ಯೆಗಳನ್ನು ತರಿಸಿ ನೋಡಿ. ಯಾವ ಜಿಲ್ಲೆಯಲ್ಲಿ ಡಿಫಂಕ್ಟ್ ಆಗಿವೆ, ಎಲ್ಲಿ ಅವಶ್ಯಕತೆ ಇದೆ, ಅಲ್ಲಿಯ ಮಕ್ಕಳ ಸಂಖ್ಯೆಯನ್ನು ಕೂಡ ತಾವು ನಿರ್ದೇಶಕರಿಂದ ತರಿಸಿಕೊಂಡು ನೋಡಬೇಕು. ನಮ್ಮ ಜಿಲ್ಲೆಯಲ್ಲಿ ಪದವಿಪೂರ್ವ ಕಾಲೇಜುಗಳ ಕೊರತೆ ಬಹಳಷ್ಟು ಇದೆ. ನನ್ನ ಕ್ಷೇತ್ರ ಲಿಂಗಸೂರಿನಲ್ಲಿ ಕೇವಲ ಎರಡು ಕಾಲೇಜುಗಳು ಇರುವುದರಿಂದ ತಮಗೂ ಕೂಡ ಮನವಿಯನ್ನು ಸಲ್ಲಿಸಿದ್ದೇವೆ. ಮುಖ್ಯಮಂತ್ರಿಗಳಿಗೂ ಕೂಡ ಮನವಿಯನ್ನು ಸಲ್ಲಿಸಿದ್ದೇವೆ. ಇನ್ನೂ ಒಂದು ಪದವಿಪೂರ್ವ ಕಾಲೇಜನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಕೇಳುತ್ತೇನೆ. ನನ್ನ ಪಕ್ಕದ ಜಿಲ್ಲೆಯನ್ನು ನೋಡಿದಾಗ ಕೇವಲ ಆರು-ಎಂಟು ವಿದ್ಯಾರ್ಥಿಗಳು ಇರತಕ್ಕಂಥ ಜೂನಿಯರ್ ಕಾಲೇಜುಗಳು ಇವೆ. ಅವುಗಳನ್ನು ಏನಾದರೂ ಮಾಡಿ ನಮ್ಮ ಜಿಲ್ಲೆಗೆ ವರ್ಗಾವಣೆ ಮಾಡುವುದಕ್ಕೆ ಸಾಧ್ಯವಿದ್ದರೆ, ಕಾನೂನು ರೀತಿ ಮಾಡಿಕೊಟ್ಟು ನಮಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ವಿಶ್ವನಾಥ್: ಈಗಾಗಲೇ, ನಾವು ಅಧಿಕಾರಿಗಳಿಗೆ ಆದೇಶ ಮಾಡಿದ್ದೇವೆ. ಯಾವ್ಯಾವ ಜಿಲ್ಲೆಯಲ್ಲಿ ಕಡಿಮೆ ವಿದ್ಯಾರ್ಥಿಗಳು ಇದ್ದು, ಹೆಚ್ಚು ಶಿಕ್ಷಕರು ಇದ್ದರೆ ಆರ್ಥಿಕ ಹೊರೆ ಹೆಚ್ಚಾಗುತ್ತದೆ. ಅದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ಲಾಭವಾಗುತ್ತಿಲ್ಲ, ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿಲ್ಲ ಎನ್ನತಕ್ಕಂಥ ಪಟ್ಟಿಯನ್ನು ಇಡೀ ರಾಜ್ಯದಿಂದ ನಾವು ತರಿಸುತ್ತಿದ್ದೇವೆ. ಅದರಲ್ಲಿ ಈ ಜಿಲ್ಲೆಗೆ ಮಾತ್ರ ಕೊಡಬೇಕು ಅಂತಿಲ್ಲ. ರಾಜ್ಯದ ಯಾವುದೇ ಭಾಗದಲ್ಲಿ ಅದು ನಿಶ್ಯಕ್ತಿ ಆಗಿದ್ದರೆ, ಡಿಫಂಕ್ಟ್ ಆಗಿದ್ದರೆ, ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಕೊಡತಕ್ಕಂಥ ಕಾರ್ಯಕ್ರಮವನ್ನು ನಾವು ಮಾಡುತ್ತೇವೆ.

ಶ್ರೀ ಹಂಪನಗೌಡ ಬಾದರ್ಲಿ: ನಾವು ವಿನಂತಿಸಿಕೊಳ್ಳುವುದು ಇಷ್ಟೆ. ರಾಜ್ಯದಲ್ಲಿ ಯಾವ್ಯಾವ ಜಿಲ್ಲೆಯಲ್ಲಿ ಡಿಫಂಕ್ಟ್ ಆದ ಕಾಲೇಜುಗಳು ಇವೆ, ಆ ಪಟ್ಟಿಯನ್ನು ತಾವು ಕಳಿಸಿಕೊಡಬೇಕು. ನಮಗೆ ಏನಾಗುತ್ತದೆ ಎಂದರೆ ನಮ್ಮದು ಹಿಂದುಳಿದಿರತಕ್ಕಂಥ ಒಂದು ಭಾಗ. ಅಲ್ಲಿ ಬೇರೆ ಜಿಲ್ಲೆಗಳಿಂದ ನಮ್ಮ ತಾಲ್ಲೂಕುಗಳಿಗೆ ಈ ಕಾಲೇಜುಗಳನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಆ ಪಟ್ಟಿಯನ್ನು ದಯವಿಟ್ಟು ನಮಗೆ ಒದಗಿಸಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್.ವಿಶ್ವನಾಥ್: ಪಟ್ಟಿಯನ್ನು ಕೊಡಲಾಗುತ್ತದೆ.